
ಭಾರತೀಯಆದಿಮಜಾತಿಸೇವಕಸಂಘ (ರಿ)
ಬಿ.ಎ.ಜೆ. ಎಸ್. ಎಸ್. ಕಲಾಮತ್ತುವಾಣಿಜ್ಯಮಹಿಳಾಮಹಾವಿದ್ಯಾಲಯ
ಹಲಗೇರಿರಸ್ತೆ.
Permanently Affiliated to Karnataka State Women's University Bijapur.
Bhartiya Adimjati Sevak Sangh(R)
BA JSS ARTS AND COMMERCE COLLEGE FOR WOMEN
Sri Gayatri Campus, Halageri Road Ranebennur581115 Dist.: Haveri State Karnataka
STD:08373- Office: 267968, 297468, Mobile: 9481736128
Email: bajsswck09@gmail.com web: bajsswomenscollege.com



SHIKSHAN SOUDHA
ISSN : 2249-249X
7th September 2019
Volume-IX Issue-II
RNI REG.NO.KARKAN/2011/38712

ಕಡೋಲಿ ಜಾತ್ರೆ

ದಕ್ಷಿಣ ಮಹಾರಾಷ್ಟ್ರದಲ್ಲಿರುವ ಕೊಲ್ಲಾಪುರ ಜಿಲ್ಲೆಗೆ ಸೇರಿರುವ ಹಾತಕಣಗಲೆ ತಾಲೂಕಿನ ಪಟ್ಟಣ ಕಡೋಲಿ. ಈ ಹಿಂದೆ ಅಚ್ಚಗನ್ನಡ ಪ್ರದೇಶವಾಗಿದ್ದು, ಜಾತ್ರೆಗೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಇವತ್ತಿಗೂ ಕನ್ನಡ ನಾಡಿನಿಂದಲೇ ಬಂದು ಸೇರುತ್ತಾರೆಂದರೆ ತಪ್ಪಾಗಲಾರದು. ಕೊಲ್ಲಾಪುರದಿಂದ ಸುಮಾರು ಇಪ್ಪತ್ತು ಕಿ.ಮೀ. ದೂರವಿದ್ದ ಪಟ್ಟಣ ಕಡೋಲಿ ಕುರುಬರ ಜೋಡಿ ದೈವಗಳಾದ ಇಟ್ಟಪ್ಪ – ಬೀರಪ್ಪರ ಪರಂಪರೆಯ ಸುಪ್ರಸಿದ್ಧ ಪುಣ್ಯಕ್ಷೇತ್ರವಾಗಿದೆ.ಕುರುಬರ ಆರಾಧ್ಯ ದೈವ ಇಟ್ಟಪ್ಪ. ಇಲ್ಲಿ ಇಟಲನಾದರೆ, ಕುರುಬರ ಕುಲದೈವವಾದ ಬೀರಪ್ಪನು ಇಲ್ಲಿ ಬ್ರಮಲ ಅಥವಾ ಬೀರೋಬನಾಗಿದ್ದಾನೆ. ಮಹಾರಾಷ್ಟ್ರ ಹಾಗೂ ಮುಂಬೈ ಕರ್ನಾಟಕದ ಲಕ್ಷಾಂತರ ದನಗರ– ಕುರುಬ ಸಮುದಾಯದ ಭಕ್ತರು ಈ ಕ್ಷೇತ್ರಕ್ಕೆ ನಡೆದುಕೋಳ್ಳುತ್ತಾರೆ. ಇಟಲನು ಬೀರಪ್ಪನ ಸಖ ಅಥವಾ ಸಹೋದರ, ಶಿಷ್ಯನಾಗಿದ್ದಾನೆಂದು ನಂಬಲಾಗಿದೆ. ಯಾದವರ ದೇವರಾದ ಈತ ಇಂದಿಗೂ ತನ್ನ ಗೋವಳಿಗರ ಮೂಲರೂಪದಲ್ಲಿ ಕಡೋಲಿಯಲ್ಲಿ ನೆಲೆಸಿದ್ದಾನೆ.

ಪ್ರತೀ ವರ್ಷ ಪೊದಲೆ ನಿಶ್ಚಯವಾಗಿರುವಂತೆ ಭೌಮ್ ಪೂರ್ಣಿಮೆಯ ನಂತರ ಬರುವ ಶೀಗಿ ಹುಣ್ಣಿಮೆಯ ನಂತರದ ಮೃಗ ನಕ್ಷತ್ರದಲ್ಲಿ ಮೂರು ದಿನಗಳ ಕಾಲ ಭಾರಿ ಜಾತ್ರೆಯು ನಡೆಯುತ್ತದೆ. ಮಹಾರಾಷ್ಟ್ರದ ನಾಸಿಕದಲ್ಲಿ ಹನ್ನೆರಡು ವರ್ಷಕೊಮ್ಮೆ ಕುಂಭ ಮೇಳ ಜರಗುವಂತೆ ಕಡೋಲಿಯಲ್ಲಿ ಪ್ರತೀ ವರ್ಷ ಕುರುಬರ ಕುಂಭ ಮೇಳ ನಡೆಯುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ. ಅಲ್ಲಿ ಬೂದಿ–ವಿಭೂತಿ ಬಳಿದುಕೊಂಡು ಸಾದು ಸಂತರು ಜಮಾಯಿಸಿರುವಂತೆ. ಇಲ್ಲಿ ಬಂಗಾರ ವರ್ಣದ ಭಂಡಾರವನ್ನು ಲೇಪಿಸಿಕೊಂಡು ಲಕ್ಷಾಂತರ ಕುರುಬ ಭಕ್ತರು ಕಾಣಿಸಿಗುವರು.

ಕಡೋಲಿ ಜಾತ್ರೆ ಅಕ್ಷರಶಃ ಹಳದಿ ವರ್ಣ ರಂಜಿತ ಹಬ್ಬ. ಕಣ್ಣಿಗೆ ಕಾಣಿಸುವಷ್ಟು ದೂರದವರೆಗೂ ಭಂಡಾರದ ಜಡಿ ಮಳೆ, ಸುರಿಮಳೆ, ಭಂಡಾರದಲ್ಲಿ ಮಿಂದೆದ್ದ ಲಕ್ಷೋಪಲಕ್ಷ ಭಕ್ತ ಜನಸ್ತೋಮ. ಕಾರ್ಮೋಡ, ಬೀಳಿಮೊಡ ತೆಲುವಂತೆ ಕುರಿ ಉಣ್ಣೆಯ ಕೆಂತುರು, ಕೈತಾಳ ಹಾಗೂ ಡೋಳ್ಕಿನ ಮೇಳಗಳ ತಾಂಡವ ಸದ್ದು, ಹರಿತವಾದ ಅಲಗುಗಳೊಂದಿಗೆ ಹೌಹಾರುವಂತಹ ಸಾಹಸ ಪ್ರದರ್ಶನ ಮಾಡುವ ಫರಂಡೆ, ನಾನಾ ನಮೂನೆ ಸೇವೆಗಳಲ್ಲಿ ಮೈಮರೆತು ಸೇರುವ ಭಕ್ತ ಸಮೂಹ, ಕುರುಬರ ಜೋಡಿ ದೈವಗಳ ಜಾತ್ರೆ ಭಕ್ತಿ ಭಾವದಿಂದ ನಡೆಯುತ್ತದೆ.

ಎಲ್ಲರಿಗೂ ಗೊತ್ತಿರುವಂತೆ ಕುರುಬರ ಆರಾಧ್ಯ ದೇವರಾದ ಬೀರಪ್ಪನನ್ನು ಹಲವು ವಿದ್ವಾಂಸರು ಹಾಲುಮತ ಧಾರ್ಮಿಕ–ಸಾಮ್ರಾಜ್ಯದ ಚಕ್ರವರ್ತಿಯೆಂದೆ ಕರೆದಿದ್ದಾರೆ. ಒಬ್ಬ ಚಕ್ರವರ್ತಿಗೆ ಇರಬೇಕಾದ ರಾಜ ಪರಿವಾರ ಇರುವಂತೆ ಇಟ್ಟಪ್ಪ – ಬೀರಪ್ಪರಿಗೆ ದಳವಾಯಿ, ಈರಗಾರ, ಪೂಜಾರಿ, ಪರಿಚಾರಕರು, ಕೋಲಕಾರಗು ಸುಂತಾದ ವೀರಪಡೆ ಇರುತ್ತದೆ. ಇಲ್ಲಿ ಈರಗಾರರ ಪಾತ್ರ ಬಹು ಮುಖ್ಯವಾಗಿದ್ದು, ಜಾತ್ರೆಯ ದಿನ ಮೆರವಣಿಗೆ ನಡೆಯುವಾಗ ಬೀರದೇವ ಇಟ್ಟಪ್ಪರ ಪಂಜಿನ ಸಲಾಮಿನೆರು ಸಲಾಮ ಸೇವೆ ಸಲ್ಲಿಸುತ್ತಾರೆ. ನಾಲ್ಕು ದಿಕ್ಕಿಗೆ ಪಂಜನ್ನು ಬೆಳಗಿ ಅಷ್ಟ ದಿಕ್ಪಾಲಕರಿಗೆ ನಮಿಸಿ, ನಂತರ ಜೋಡಿ ದೇವರಿಗೆ ನಮಸ್ಕರಿಸಿ ನಂತರ ಈರಗಾರನು ಇಟ್ಟಪ್ಪ–ಬೀರಪ್ಪರ ಮೂರ್ತಿಯ ಮುಂದೆ ಬಂದು ಈರಗಾರಿಕೆ ಮಾಡಿ ಸುಕ್ ಸುಖೋ, ಶಿವ್ ಶಿವೋ ಸುವೋ, ಎಂದು ಘರ್ಜಿಸುತ್ತಾನೆ. ಇದು ದೇವರಿಗೆ ಭಕ್ತಿಯಿಂದ ಸ್ವಾಗತ ಕೋರಿ ಮುಂದುವರೆಯಲು ಬೇಡಿಕೊಂಡಂತೆ ಎಂಬ ಅಭಿಪ್ರಾಯ ಭಕ್ತರಲ್ಲಿದೆ.

ಅಲಗು ಸೇವೆ

ಹಾಲು – ಮತದ ಕುರುಬರಲ್ಲಿ ಅಲಗು ಸೇವೆ ಒಂದು ವಿಶಿಷ್ಟ ಪದ್ಧತಿಯಾಗಿದೆ. ಅದರಲ್ಲು ಬೀರಪ್ಪ, ಇಟ್ಟಪ್ಪ, ಮಾಳಿಂಗರಾಯರ ಸಂಪ್ರದಾಯದಲ್ಲಿ ಈ ಸೇವೆ ಕಂಡುಬರುತ್ತದೆ. ಸಾಮಾನ್ಯವಾಗಿ ಅಲಗು ಎಂದರೆ ವೀರಯೋದನ ಕೈಯಲ್ಲಿನ ಕತ್ತಿ ಎಂದರ್ಥ. ಈ ಕತ್ತಿಯೂ ನೇರವಾಗಿದ್ದೂ ಎರಡು ಅಂಚುಗಳನ್ನು ಹೊಂದಿದ್ದು ಹರಿತವಾಗಿರುತ್ತದೆ. ಅಲಗನ್ನು ಹಾಯಲು ಫರಂಡಿ ನಾಡಿನಿಂದ ಅಂದರೆ ಸೊಲ್ಲಾಪುರ ಜಿಲ್ಲೆಯ 'ಮಂಡ' ತಾಲ್ಲೂಕಿನ ಅಂಜನಗಾಂವ ಊರಿನಿಂದ ಜಾತ್ರೆಯ ಸಲುವಾಗಿ ಒಂದು ತಿಂಗಳ ಕಾಲ ಉಪವಾಸ ಮಾಡುತ್ತಾ ಕಡೋಲಿಗೆ ಬಂದು ದೇವಸ್ಥಾನದ ಮುಂದೆ ಇರುವ ಸುಮಾರು ಒಂದು ಫರ್ಲಾಂಗು ದೂರದಲ್ಲಿ ಅವನಿಗಾಗಿ ಕಟ್ಟಿರುವ ಕಟ್ಟೆಯ ಮೆಲೆ ಆಸಿನನಾಗುತ್ತಾನೆ. ಆದನ್ನುಇವತ್ತಿಗೂ ಫರಂಡಿ ಕಟ್ಟೆಯೆಂದು ಕರೆಯುತ್ತಾರೆ.

ಹೆಗಡೆಯವರ ಜೋನದ ಕಾರ್ಯಕ್ರಮ ಮುಕ್ತಾಯವಾದ ಮೇಲೆ ಕಡೋಲಿ ಊರಿನ ಗೌಡರನ್ನು ಮೇರವಣಿಗೆಯ ಮೂಲಕ ದೇವಸ್ಥಾನಕ್ಕೆ ಕರೆದುಕೊಂಡು ಬರಲಾಗುತ್ತದೆ. ಅವರ ಜೊತೆಗೆ ಅಲಗನ್ನು ತೆಗೆದುಕೊಂಡು ಬರಲಾಗುತ್ತದೆ. ಪ್ರತಿ ವರ್ಷ ಜಾತ್ರೆ ಮುಕ್ತಾಯವಾದ ಮೇಲೆ ಫರಂಡಿಯ ಅಲಗನ್ನು ಗೌಡರ ಮನೆಯಲ್ಲಿ ಇಡಲಾಗುತ್ತಿದ್ದು, ಅದನ್ನು ಮುಂದಿನ ಜಾತ್ರೆ ಬರುವವರೆಗೂ ಸುರಕ್ಷಿತವಾಗಿ ಕಾಪಾಡುವುದಲ್ಲದೆ. ಅದನ್ನು ಜಾತ್ರೆಯ ದಿನ ಶುಚಿಗೊಳಿಸಿ ದೇವಸ್ಥಾನಕ್ಕೆ ತರುವುದು ಗೌಡರಿಗೆ ಇರುವ ಮಾನ. ಮೃಗ ಮಹೂರ್ತದಂದು ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಅಲಗು ಸೆವೆಯನ್ನು ಪ್ರಾರಂಭಿಸುವಂತೆ ಆಹ್ವಾನಿಸಲು ದೇವಸ್ಥಾನದಿಂದ ಒಂದು ಫರ್ಲಾಂಗ ದೂರದಲ್ಲಿರೋ ಫರಂಡಿ ಕುಳಿತಿರುವ ಫರಂಡಿ ಕಟ್ಟೆಗೆ ಮಾನಕಾರರಾದ ಹೆಗಡೆ, ಬಂತ್ಯಾ ಪೂಜಾರಿ, ಗೌಡ್ರು, ಕುಲಕರ್ಣಿ ಎಲ್ಲರು ಸೇರಿ ಫರಂಡಿ ಕಟ್ಟೆಗೆ ಬಂದು ಅಲ್ಲಿ ಗದ್ದುಗೆಯನ್ನು ಮಾಡಿ ಜೋಡು ಅಲಗನ್ನು ಇಟ್ಟು ಕೊಬ್ಬರಿ, ಖಾರೀಕ, ಎಲೆ, ಅಡಿಕೆ ಇಟ್ಟು ಪೂಜೆಗೊಂಡು ಅಲಗಿನ ಮುಂಭಾಗದಲ್ಲಿ ಹಿಡಿದುಕೊಳ್ಳುವಂತೆ ಅನುಕೂಲವಾಗಲು ಬಟ್ಟೆಯಿಂದ ಕಟ್ಟ ಫರಂಡಿಯ ಕೈಯಲ್ಲಿ ಹೊಡಲಾಗುತ್ತದೆ. ಇದಕ್ಕಿಂತ ಒಂದು ತಾಸು ಮುಂಚಿತವಾಗಿ ಫರಂಡಿಯ ಮುಂದೆ ಡೊಳ್ಳು ಸೇವೆ, ದಿತ್ತ ಸೇವೆ, ಸತ್ತಿಗೆ ಸೇವೆ ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಫರಂಡಿಯನ್ನು ಎದರುಗೊಳ್ಳಲು ಕೊತ್ವಾಲ ಪಸಕ ಬಂದಿರುತ್ತದೆ.

ಕನ್ನಡ ನಾಡಿನ ಬೇರೆ ಬೇರೆ ಭಾಗಗಳಿಂದ ಬಂದ ಅನೇಕ ಮೇಳದವರು ಜನ ತಲೆದೂಗುವಂತೆ ಭಾರಿಸುತ್ತಾರೆ. ಕಿವಿಗಡಚಿಕ್ಕುವಂತೆ ದೊಡ್ಡನಾದ ಹೊರಡಿಸುವ ಡೊಳ್ಳಿನಂತಹ ಎಶಿಷ್ಟ ವಾದ್ಯವನ್ನು ನಡಕ್ಕೆ ಕಟ್ಟಿಕೊಂಡು ಕೈಗಳಿಂದಲೇ ಭಾರಿಸುತ್ತ ಮೃದು ಮಧುರ ಧ್ವನಿ ಹೊರಡಿಸಿ ಶಹನಾಯಿಯವರ ರಾಗ ತಾಳಗಳೊಂದಿಗೆ ಮೇಳ್ಯೈಸಿಕೊಂಡು ಮೈಮರೆತು ವಾದನದಲ್ಲಿ ತಲ್ಲಿನನಾದಾಗ ಜನರೆ ತಲೆದುಗುತ್ತಾರೆ. ಎಂಬ ಹಳ್ಳಿ ಕೇರಿಯವರ ಮಾತು ಕೈಪಟ್ಟನ ನಿನಾದವನ್ನು ತಿಳಿಸುತ್ತದೆ.

ಮೂರನೇ ದಿನದ ಜಾತ್ರೆ

ಕಳೆದ ಎರಡು ದಿನಗಳಷ್ಟು ಏನು ವಿಶೇಷತೆ ಇರದಿದ್ದರು ಭಕ್ತರ ಸಂಖ್ಯೆಗೆ ಏನು ಕೊರತೆ ಇರುವದಿಲ್ಲ. ಡೋಳ್ಳಿನ ಮೇಳದವರು ಗುಂಪು ಗುಡಿ ಡೋಳ್ಳನ್ನು ನಡಕ್ಕೆ ಕಟ್ಟಿಕೊಂಡು ಭಾರಿಸಲು ಪ್ರಾರಂಭಿಸಿದರೆ. ಕಿವಿಗಳು ಮಾರ್ಧನಿಸುತ್ತವೆ. ಎದೆ ನಡಗುವುದಲ್ಲದೆ. ಭೂಮಿಯು ಅದರುತ್ತಿರುವಂತೆ ಭಾಸವಾಗುತ್ತದೆ. ಶಂಖ ಬೇರಿಗಳ ನಿನಾದವು ಆಕಾಶವನ್ನೆಲ್ಲ ತುಂಬಿತು ಎಂಬುದನ್ನು ಪುರಾಣಾದಿಗಳಲ್ಲಿ ಓದಿ ಅದು ಹೇಗೆ ಎಂದು ಶಂಕೆ ಪಡುವವರು ಇಲ್ಲಿ ಬಂದರೆ ಮಾತು ಮಾತಿಲ್ಲದೆ ಒಪ್ಪುತ್ತಾರೆ ಎಂಬಷ್ಟೆ ಆ ಧ್ವನಿ ವಾತವರಣವು ನಾದಮಯವಾಗಿರುವುದಲ್ಲದೆ, ಭಕ್ತರು ಅದರಲ್ಲಿ ಮುಳುಗಿ ಯೋಗಿರುತ್ತಾರೆ.

ಕುರಿ ಕಾಯುವ ಕಾಯಕದಲ್ಲಿ ನಿರತರಾಗಿದ್ದ ಸಮಯದಲ್ಲಿ ಕುರಿಗಾರರು ಅನೇಕ ಸಾಹಸ,ಕಸರತ್ತು ಕಲೆಗಳನ್ನು ಅಭ್ಯಾಸ ಮಾಡಿದ್ದು ಅವುಗಳನ್ನು ಮೂರನೇ ದಿನದ ಜಾತ್ರೆಯಂದು ದೇವರ ಗರ್ಭಗುಡಿಯ ಮುಂದಿನ ಪಾಳಿಯಲ್ಲಿ ಪ್ರದರ್ಶಿಸುತ್ತಾರೆ. ಅವುಗಳನ್ನು ನೋಡುವಾಗ ಬೆರಗಾಗುವುದಲ್ಲದೆ. ಹುಬ್ಬೇರಿಸಿ ಬಾಯಿ ಮೇಲೆ ಬೆರಳಿಡುವಂತೆ ಮಾಡುತ್ತವೆ. ನಿಂತ ಮನುಷ್ಯನ ಭುಜದ ಮೇಲೆ ನಿಂತು ಲಾಗ ಹಾಕುವುದು ಸಾಲಾಗಿ ಆರರಿಂದ ಏಳು ಜನ ಮಲಗಿಸಿ ಅವರನ್ನು ಮುಟ್ಟದ ಹಾಗೆ ಜಿಂಕರದಲ್ಲಿ ಒಂದು ಕಥೆಯಿಂದ ಮತ್ತೊಂದು ಜಿಕೆ ಹಾರುವದು, ಮಲಗಿ ಬೆನ್ನ ಮೇಲೆ ಒಬ್ಬ ವ್ಯಕ್ತಿಯನ್ನು ಕುಳ್ಳರಿಸಿಕೊಂಡು ಮೇಲೆಳುವಂತದ್ದು ಶೀರ್ಸಾಸನದ ರೀತಿಯಲ್ಲಿ ತಲೆಯನ್ನು ಕೆಳಗೆ ಮಾಡಿ ಕಾಲನ್ನು ಮೇಲೆ ಮಾಡಿ ಚಕ್ರಾಕಾರವಾಗಿ ತಿರುಗುವದು ಹೀಗೆ ಅನೇಕ ಕಸರತ್ತು, ಸಾಹಸಗಳು ಜನರನ್ನು ಮನರಂಜಿಸುವುದರ ಜೊತೆಗೆ ಬೆರಗುಗಣ್ಣಿನಿಂದ ನೋಡುವಂತೆ ಮಾಡುತ್ತವೆ.

ದಟ್ಟಿ ಕುಣಿತದ ಸೇವೆ

ಕೊನೆಯ ಅಂದರೆ ಮೂರನೆಯ ದಿನದ ರಾತ್ರಿ ಮತ್ತೊಂದು ಸಾಂಸ್ಕೃತಿಕ ಕಲೆಯಾದ ದಟ್ಟಿ ಕುಣಿಯುವ ಕಾರ್ಯಕ್ರಮ ನಡೆಯುತ್ತದೆ. "ಒಂದು ವಿಶಿಷ್ಟ ವೇಷ ಹಾಕಿಕೊಂಡು ಕೈ ಪಟ್ಟು ಭಾರಿಸುವವನ ತಾಳಗತಿಯು ಸಂಜ್ಞೆಗೆ ಸರಿಯಾಗಿ ವಿವಿಧ ರೀತಿಯಿಂದ ಕುಣಿಯುವುದಕ್ಕೆಯೇ ದಟ್ಟಿ ಕುಣಿತವೆಂದು ಹೆಸರು" ದಟ್ಟಿ ಅಥವಾ ದಟ್ಟಲು ಎಂದರೆ ಕೈ ಪಟ್ಟು ಎಂಬರ್ಥವನ್ನು ಕೊಡುತ್ತಿದ್ದು, ಕೈಪಟ್ಟು ವಾದ್ಯದೊಡನೆ ಕೆಂಪು ಸಮವಸ್ತ್ರ ಧರಿಸಿ ಲಾಗ ಹಾಕುತ್ತ ಮಾಡುವ ಕುಣಿತವಾಗಿದೆ. ಹಾಲುಮತದ ಆರಾಧ್ಯ ದೈವಗಳಾದ ಇಟ್ಟಪ್ಪ, ಬೀರಪ್ಪ, ಮೈಲಾರಲಿಂಗನನ್ನು ಒಲಿಸಿಕೊಳ್ಳಲು ಮಾಡುವ ನೃತ್ಯ ಇದಾಗಿದೆ. ಒಂದು ವಿಶಿಷ್ಟ ವೇಷ ಹಾಕಿಕೊಂಡು ಕೈ ಪಟ್ಟು ಭಾರಿಸುವವನ ತಾಳಗತಿಯ ಸಂಜ್ಞೆಗೆ ಸರಿಯಾಗಿ ವಿವಿಧ ರೀತಿಯಿಂದ ದಟ್ಟಿ ಕುಣಿಯುವ ಇವರು ಮೈ ಮರೆತು ಕುಣಿಯುತ್ತಿರುವಾಗ ಶಿವನು ತನ್ನ ಗಣದೊಂದಿಗೆ ಭರತನಾಟ್ಯದಲ್ಲಿ ತೊಡಗಿರುವನೋ ಎಂಬ ಭಾವನೆ ಮೊಳೆಯುತ್ತದೆ. ಈ ಹಾಲುಮತದವರು ವೀರ ಬೀರದೇವರ ಭಕ್ತರಲ್ಲದೆ. ಅಂತೆಯೇ ಈ ದಟ್ಟಿ ಕುಣಿಯುವ ಭಂಗಿ ಭರತ ನಾಟ್ಯಕ್ಕೆ ಸಮೀಪವಾಗಿರಬಹುದು ನಾನು ಅನ್ನುವುದು ಎಂಬ ಮಾತು ಸಾಕ್ಷಾತ್ ಪರಿವರ್ತನ ರೂಪದಲ್ಲಿರುವ ಇಟ್ಟಪ್ಪ- ಬೀರಪ್ಪನನ್ನು ಒಲಿಸಿಕೊಳ್ಳಲು ದಟ್ಟಿ ಕುಣಿತ ಬಳಸುತ್ತ ಬರಲಾಗಿದೆ.

ಕೊನೆ ಟಿಪ್ಪಣಿ

1. ಎಫ್. ಟಿ. ಹಳ್ಳಿಕೇರಿ : ಇಟ್ಟಪ್ಪ – ಹಾಲುಮತ ಸಾಂಸ್ಕೃತಿಕ ವೀರ: ಹಾಲುಮತ ಸಂಸ್ಕೃತಿ.
2. ಪ್ರೊ ಜ್ಯೋತಿ ಹೊಸೂರ : ಬೀರಪ್ಪ ದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು ಜಾನಪದ ಮಂಟಪ, ಕಾಲಗತಿ ಪ್ರಕಾಶನ ಬೆಳಗಾವಿ

ವಿದ್ಯಾನಿಧಿ ಪ್ರಕಾಶನ® ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಯಿ' ಜೆ. ಟಿ. ಮಠ ರೋಡ, ಗದಗ-582 101
ದೂರವಾಣಿ : 08372-237527, 277527
e-mail : vidyanidhiprakashana@gmail.com. www. vidyanidhionline.com



Co-ordinator IQAC

PRINCIPAL
B.A.J.S.S. College For Women
Halageri Road, Ranebennur